

ವಿಶ್ವೇಶ್ವರ ಭಟ್
vbhat@vijaykarnataka.com

# ಸಮ್ಮೇಳನ ಅಧ್ಯಕ್ಷರಿಗೆ ಕಾಣಿಕೆ: ಎರಡು ಪ್ರಸಂಗಗಳು

ಗದಗದಲ್ಲಿ ನಡೆದ ಎಪ್ಪತ್ತಾರನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆ ಗೀತಾ ನಾಗಭೂಷಣ ಅವರ ಮಾತುಗಳನ್ನು ಕೇಳುತ್ತಿದ್ದರೆ ಚಪ್ಪಾಳೆಗಳ ಸುರಿಮಳೆ. ಅವರು ಸರಕಾರ, ಮುಖ್ಯಮಂತ್ರಿಯನ್ನು ತರಾಟೆಗೆ ತೆಗೆದುಕೊಂಡರು. ಗಣಿ ಮಾಫಿಯಾ ಬಗ್ಗೆ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.



ಬಡವರು, ದೀನದಲಿತರ ಬಗ್ಗೆ ತಮ್ಮ ಕನಿಕರ ವ್ಯಕ್ತಪಡಿಸಿದರು. ಉತ್ತರ ಕರ್ನಾಟಕದ ನೆರೆ ಸಂತ್ರಸ್ತರ ದುಃಖಕ್ಕೆ ದನಿಯಾದರು. 'ಒಂದು ದಿನ ಆ ಸಂತ್ರಸ್ತರ ಗುಡಿಸಲಲ್ಲಿ ವಾಸ ಮಾಡಿ ಬನ್ನಿ, ಆಗ ಅವರ ಹೊಟ್ಟೆಯಲ್ಲಿರುವ ಸಂಕಟವೇನೆಂಬುದು ಗೊತ್ತಾಗುತ್ತದೆ ನಿಮಗೆ' ಎಂದು ವೇದಿಕೆಯಲ್ಲಿ ತಮ್ಮ ಪಕ್ಕದಲ್ಲೇ ಕುಳಿತ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಹೇಳಿದಾಗ ದೀರ್ಘ ಕರತಾಡನ. ಅವರ ಮಾತಿನಲ್ಲಿ ದೈನಂದಿನ ಬದುಕಿನ ಕಷ್ಟ, ರೈತರ ಆತ್ಮಹತ್ಯೆ, ಬಡವರ ಬವಣೆ, ಹಳ್ಳಿಗಾಡಿನ ದುರ್ಬರ ಬದುಕು... ಎಲ್ಲವೂ ಪ್ರಸ್ತಾಪವಾದವು. ಅವರ ಮಾತು, ಕಾಳಜಿಯನ್ನು ಮೆಚ್ಚಲೇಬೇಕು.

ಸಮಾವೇಶದ ಸಮಾರೋಪ ಸಮಾರಂಭದ ಮಧ್ಯದಲ್ಲಿ ಸಮ್ಮೇಳನ ಸಂಘಟಕರು ಗೀತಾ ನಾಗಭೂಷಣ ಅವರಿಗೆ ಹನ್ನೊಂದು ಲಕ್ಷದ ಹನ್ನೊಂದು ಸಾವಿರದ ಹನ್ನೊಂದು ರೂಪಾಯಿಯ ಚೆಕ್ಕನ್ನು ಗೌರವಧನವಾಗಿ ಅರ್ಪಿಸಿದ್ದರು. ಈ ಬಗ್ಗೆ ಕೊನೆಯಲ್ಲಿ ತಮ್ಮ ಮಾತಿನಲ್ಲಿ ಏನಾದರೂ ಪ್ರಸ್ತಾಪಿಸಬಹುದು, ಆ ಮೂಲಕ ಮತ್ತಷ್ಟು ಚಪ್ಪಾಳೆ ಗಿಟ್ಟಿಸಿಕೊಳ್ಳಬಹುದು ಅಂದುಕೊಂಡವರು ನಿರಾಸೆಗೊಂಡರು. ಗೀತಾ ನಾಗಭೂಷಣ ಆ ಬಗ್ಗೆ ಚಕಾರವನ್ನೂ ಎತ್ತಲಿಲ್ಲ. ಚೆಕ್ಕನ್ನು ಪರ್ಸ್‌ನೊಳಗೆ ಜೋಪಾನವಾಗಿ ಇಟ್ಟುಕೊಂಡರು. ಇರಲಿ.

ಆಗ ನನಗೆ ಹನ್ನೊಂದು ವರ್ಷಗಳ ಹಿಂದೆ ನಡೆದ ಒಂದು ಪ್ರಸಂಗ ನೆನಪಿಗೆ ಬಂತು. 1999ರಲ್ಲಿ ನಡೆದ ಕನಕಪುರದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವದು. ಡಾ. ಎಸ್.ಎಲ್. ಭೈರಪ್ಪನವರು ಸಮ್ಮೇಳನದ ಅಧ್ಯಕ್ಷರು. ಬಸವಾರಾಧ್ಯ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು. ಸಮ್ಮೇಳನದ ಉಸ್ತುವಾರಿ ಅಂದು ಸಚಿವರಾಗಿದ್ದ ಪಿ.ಜಿ.ಆರ್. ಸಿಂಧ್ಯಾ ಅವರದ್ದು. ಎಲ್ಲರೂ ವೇದಿಕೆ ಮೇಲಿದ್ದರು. ಅಂದಿನ ಮುಖ್ಯಮಂತ್ರಿ ಜೆ.ಎಚ್. ಪಟೇಲರ ಸಮ್ಮುಖದಲ್ಲಿ ಡಾ. ಭೈರಪ್ಪನವರಿಗೆ ಒಂದು ಲಕ್ಷ ರೂ. ನೀಡಲಾಯಿತು. ಸಮ್ಮೇಳನದ ಅಧ್ಯಕ್ಷರಿಗೆ ದೊಡ್ಡ ಮೊತ್ತದ ಗೌರವಧನ ನೀಡುವ ಸಂಪ್ರದಾಯ ಆ ಸಮ್ಮೇಳನದಿಂದಲೇ ಆರಂಭವಾಗಿತ್ತು.

ಎಲ್ಲರಿಗೂ ಅಚ್ಚರಿ ಹುಟ್ಟಿಸುವಂತೆ ಡಾ. ಭೈರಪ್ಪನವರು ತಮಗೆ ಕೊಟ್ಟ ಆ ಒಂದು ಲಕ್ಷ ರೂ.ಯನ್ನು ಕಸಾಪ ಅಮೃತನಿಧಿಗೆ ದೇಣಿಗೆಯಾಗಿ ಕೊಟ್ಟುಬಿಟ್ಟರು!

ಆ ಸಂದರ್ಭದಲ್ಲಿ ಅವರು ಹೇಳಿದ ಮಾತುಗಳನ್ನು ಸ್ಮರಿಸಿಕೊಳ್ಳಬೇಕು– 'ಸಾಹಿತ್ಯ ಸಮ್ಮೇಳನದ ಅಧ್ಯಕ್ಷಗಿರಿಯೇ ಒಂದು ದೊಡ್ಡ ಗೌರವ, ಸ್ಥಾನಮಾನ. ನೀವು ನನಗೆ ಆ ಗೌರವ ಕೊಟ್ಟಿದ್ದೀರಿ. ಆದರೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಿಗೆ ಹಣ ಕೊಡುವ ಸಂಪ್ರದಾಯ ಸರಿ ಅಲ್ಲ. ಇದರಿಂದ ಸಮ್ಮೇಳನ ಅಧ್ಯಕ್ಷರಾಗುವುದಕ್ಕೆ ಮುಂದಿನ ಸಲದಿಂದ ವಶೀಲಿಬಾಜಿ ಆರಂಭವಾಗುತ್ತದೆ. ಪ್ರಭಾವ ಬೀರಿ ಅಪಾತ್ರರು ಅಧ್ಯಕ್ಷರಾಗುವುದಕ್ಕೆ ಆಸ್ಪದ ನೀಡಿದಂತಾಗುತ್ತದೆ. ಆಗ ಸಮ್ಮೇಳನ ಅಧ್ಯಕ್ಷರ ಘನತೆಗೆ ಕುಂದುಂಟಾಗುತ್ತದೆ. ಈ ಸಮ್ಮೇಳನದ ಅಧ್ಯಕ್ಷರಾಗಿದ್ದಕ್ಕೆ ನೀವು ನನಗೆ ಯಥೋಚಿತ ಸನ್ಮಾನ ಮಾಡಿದ್ದೀರಿ. ಅತ್ಯಂತ ಗೌರವದಿಂದ ನಡೆಸಿಕೊಂಡಿದ್ದೀರಿ. ನೀವು ಕೊಟ್ಟ ಹೂವು, ತುರಾಯಿ, ಹಾರ, ಹಣ್ಣುಹಂಪಲು ಎಲ್ಲ ಸ್ವೀಕರಿಸಿದ್ದೇನೆ. ಆದರೆ ಈ ಹಣ ಮಾತ್ರ ಬೇಡ. ಅದನ್ನು ಕಸಾಪ ಅಮೃತನಿಧಿಗೆ ಕೊಡುತ್ತೇನೆ. ಅಧ್ಯಕ್ಷರಿಗೆ ಹಣ ಕೊಡಬೇಡಿ. ಅವರ ಹಲ್ಲು ಗಟ್ಟಿಯಿದ್ದರೆ, ಚಕ್ಕುಲಿ, ಕೋಡುಬಳೆ ಕೊಡಿ.'

# ಉಂಡೆನಾಮ: ಒಂದು ಜಿಜ್ಞಾಸೆ

ಕೆಲ ದಿನಗಳ ಹಿಂದೆ ನಮ್ಮ ಪತ್ರಿಕೆಯಲ್ಲಿ ಪ್ರಕಟವಾದ ಪದಪ್ರಯೋಗದ ಬಗ್ಗೆ ಗೃಹಿಣಿಯೊಬ್ಬರು ಆಕ್ಷೇಪ ವ್ಯಕ್ತಪಡಿಸಿದ್ದರು. ಇನ್ನು ಮುಂದೆ ಆ ಪದವನ್ನು ಪತ್ರಿಕೆಯಲ್ಲಿ ಯಾವುದೇ ಕಾರಣಕ್ಕೂ ಬಳಸಬೇಡಿ ಎಂದು ವಿನಂತಿಸಿಕೊಂಡರು.

ನಮ್ಮ ಕ್ರೈಮ್ ವರದಿಗಾರರು ತಮ್ಮ ವರದಿಯಲ್ಲಿ ವಂಚಕನೊಬ್ಬನ ಬಗ್ಗೆ ಬರೆಯುವಾಗ 'ಹಲವಾರು ಜನರಿಗೆ ಉಂಡೆನಾಮ ತಿಕ್ಕಿದ ಈತ ತಲೆಮರೆಸಿ ಕೊಂಡಿದ್ದಾನೆ' ಎಂದು ಬರೆದಿದ್ದರು. ಆ ಗೃಹಿಣಿಯ ತಕರಾರು ಈ ಸುದ್ದಿ ಪ್ರಕಟಿಸಿದ್ದಕ್ಕೆ ಅಲ್ಲ, ಆದರೆ 'ಉಂಡೆನಾಮ ತಿಕ್ಕಿದ' ಎಂಬ ಪದಪ್ರಯೋಗದ ಬಗ್ಗೆ. ಆ ಗೃಹಿಣಿಯ ತಕರಾರನ್ನು ಆಕೆಯ ಮಾತುಗಳಲ್ಲಿ ಕೇಳಬೇಕು– 'ಏನ್ರೀ, ಉಂಡೆನಾಮ ತಿಕ್ಕಿದ ಅಂತ ಬರೀತೀರಲ್ಲ, ಈ ಪ್ರಯೋಗದಿಂದ ನೀವು ನಮ್ಮ ಜನಾಂಗವನ್ನು ಅವಮಾನ ಮಾಡಿದ್ದೀರಿ. ನನ್ನ ಯಜಮಾನರು ಪ್ರತಿದಿನ ಉಂಡೆನಾಮವನ್ನು ಹಣೆಗೆ ತಿಕ್ಕಿಕೊಳ್ಳುತ್ತಾರೆ. ಅವರಂತೆ ಅವೆಷ್ಟೋ ಮಂದಿ ಪ್ರತಿನಿತ್ಯ ದೇವರಪೂಜೆಗೆ ಮುನ್ನ ಉಂಡೆನಾಮ ಹಣೆಗೆ ತಿಕ್ಕಿಕೊಳ್ಳುತ್ತಾರೆ. ಅಂದರೆ ಅವರೆಲ್ಲ ವಂಚಕರಾ? ನಿಮ್ಮ ದೃಷ್ಟಿಯಲ್ಲಿ ಉಂಡೆನಾಮ ತಿಕ್ಕೋದು ಅಂದ್ರೆ ಏನು? ಇನ್ನು ಮುಂದೆ ದಯವಿಟ್ಟು ಆ ಪದವನ್ನು ಬಳಸಬೇಡಿ. ಹಾಗೇನಾದರೂ ಬಳಸಿದರೆ ನಿಮ್ಮ ಪತ್ರಿಕೆ ಓದೋದನ್ನೇ ನಿಲ್ಲಿಸಿಬಿಡುತ್ತೇವೆ.'

ನಾನು ಆ ಗೃಹಿಣಿಯ ಮಾತುಗಳನ್ನು ಶಾಂತಚಿತ್ತನಾಗಿ ಆಲಿಸಿದೆ. ಕೊನೆಯಲ್ಲಿ 'ಮೇಡಂ, ಈ ಪದ ಪ್ರಯೋಗದಿಂದ ನಿಮಗೆ ಬೇಸರವಾಗಿದ್ದರೆ ವಿಷಾದವಿರಲಿ. ಇದು ನಿಮ್ಮ ಯಜಮಾನರ ಹಾಗೂ ಅವರ ಹಾಗೆ ಯೋಚಿಸುವ ಅವೆಷ್ಟೋ ಜನರ ಬೇಸರಕ್ಕೆ ಕಾರಣವಾಗಬಹುದು ಎಂದು ಗೊತ್ತಿರಲಿಲ್ಲ. ಆಯಿತು ಬಿಡಿ, ಇನ್ನು ಮುಂದೆ ಆ ಪದಪ್ರಯೋಗ ಮಾಡುವುದಿಲ್ಲ' ಎಂದೆ. ಆಗಲೇ ಆ ಗೃಹಿಣಿ ಸುಮ್ಮನಾಗಿದ್ದು.

ಮಾತು ಮುಗಿಸುವ ಮುನ್ನ 'ಮೇಡಂ, ಮುಂದೆ ಎಂದಾದರೂ– ಪುರೋಹಿತರು ಉಂಡೆನಾಮ ತಿಕ್ಕಿಕೊಂಡು ಪೂಜೆ ಆರಂಭಿಸಿದರು– ಎಂಬ ಅರ್ಥದಲ್ಲಿ ಬರೆಯುವ ಪ್ರಸಂಗ ಬಂದಾಗ ಆ ಪದಪ್ರಯೋಗ ಮಾಡಿದರೆ ನಿಮಗೆ ಬೇಸರವಾಗಲಿಕ್ಕಿಲ್ಲ ಅಲ್ಲವೇ?' ಎಂದು ಕೇಳಿದಾಗ, ಪುನಃ ಅವರನ್ನು ಕೆಣಕಿದಂತಾಯಿತೋ ಏನೋ, ಜೋರಾಗಿ ಮಾತಾಡಲಾರಂಭಿಸಿದರು– 'ನಾನು ಹೇಳ್ತೀನಿ, ನೀವು ಪತ್ರಿಕೆಯವರು ಇದ್ದೀರಲ್ಲ, ಆ ಉಂಡೆನಾಮ ತಿಕ್ಕುವುದರ ಅರ್ಥವನ್ನೇ ತಿರುಚಿಬಿಟ್ಟಿದ್ದೀರಿ. ಆ ಪದಪ್ರಯೋಗ ಮಾಡಿದರೆ ಸಾಕು ಬೇರೆಯ ಅರ್ಥವೇ ತಲೆಯೊಳಗೆ ಸುಳಿಯುತ್ತದೆ. ಒಳ್ಳೆಯ ವಿಚಾರವೇ ಬರೊಲ್ಲ. ಉಂಡೆನಾಮದ ಅರ್ಥವನ್ನೇ ಹಾಳು ಮಾಡಿಬಿಟ್ರಿ ನೀವು. ದಮ್ಮಯ್ಯ ಅಂತೀನಿ, ಬೇಡ ಆ ಪ್ರಯೋಗ ನಿಲ್ಲಿಸಿಬಿಡಿ. ನಿಮ್ಮಿಂದಾಗಿ ನಮ್ಮ ಯಜಮಾನರು ಉಂಡೆನಾಮ ತಿಕ್ಕುವಾಗಲೆಲ್ಲ ನನಗೆ ಕೆಟ್ಟ ಯೋಚನೆಯೇ ಬರುತ್ತದೆ.'

ಹೀಗೆಲ್ಲ ಈ ಉಂಡೆನಾಮ ಎಂಬ ಒಂದು ಪದ ಇಷ್ಟೆಲ್ಲ ರಾದ್ಧಾಂತ ಮಾಡಬಹುದೆಂಬ ಸಣ್ಣ ಸುಳಿವೂ ಇರಲಿಲ್ಲ.

ಮೊನ್ನೆ ಬೆಂಗಳೂರು ಸನಿಹದ ಬಾಗಲಗುಂಟೆ ಬಳಿಯಿರುವ ನಾಗಸಂದ್ರದ ಟಿ.ಸಿ. ಲಲಿತಾ ರವಿಶಂಕರ್ ಬರೆದಿದ್ದರು– 'ನಿಮ್ಮ ಪತ್ರಿಕೆಯಲ್ಲಿ 'ಬಿಡಿಎ ಅಧಿಕಾರಿಗಳಿಗೆ ಗೂಸಾ' ಎಂಬ ಶೀರ್ಷಿಕೆಯಡಿಯಲ್ಲಿ ಸುದ್ದಿ ಬರೆದಿದ್ದೀರಿ. ಕರ್ತವ್ಯನಿರತ ಸರಕಾರಿ ಅಧಿಕಾರಿಗಳ ಮೇಲಿನ ಹಲ್ಲೆಯನ್ನು ಗೂಸಾ, ಧರ್ಮದೇಟು ಎಂಬ ಪದಗಳಿಂದ ವಿವರಿಸುವುದು ಎಷ್ಟು ಸಮಂಜಸ?'



ಲಲಿತಾ ರವಿಶಂಕರ್ ಇಷ್ಟಕ್ಕೇ ಸುಮ್ಮನಾಗದೇ ಮೂಲಪ್ರಶ್ನೆ ಕೇಳಿದ್ದರು– 'ಕೆಲ ದಿನಗಳ ಹಿಂದೆ ವಿಜಯ ಕರ್ನಾಟಕದಲ್ಲಿ 'ಪೊಲೀಸರಿಂದ ಹಲ್ಲೆಗೊಳಗಾದ ಪತ್ರಕರ್ತರು' ಎಂಬ ಹೆಡ್‌ಲೈನ್ ನೀಡಿದ್ದೀರಿ. ಪತ್ರಕರ್ತರೂ ಸಹ ಕರ್ತವ್ಯ ನಿರ್ವಹಿಸುವಾಗ ಪೊಲೀಸರಿಂದ ಹಲ್ಲೆಗೊಳಗಾಗಿದ್ದರು. ಅದಕ್ಕೂ ಸಹ 'ಪತ್ರಕರ್ತರಿಗೆ ಗೂಸಾ', 'ಪತ್ರಕರ್ತರಿಗೆ ಧರ್ಮದೇಟು' ಎಂಬ ಶೀರ್ಷಿಕೆ ನೀಡಬಹುದಿತ್ತಲ್ಲ? ನಿಮಗಾದರೆ ಹಲ್ಲೆ, ಬೇರೆಯವರಿಗಾದರೆ ಗೂಸಾ, ಧರ್ಮದೇಟಾ?'

ಲಲಿತಾ ರವಿಶಂಕರ್ ಮಾತಿಗೆ ನಿರುತ್ತರನಾಗಿದ್ದೆ. ನಮ್ಮ ಸುದ್ದಿಸಂಪಾದಕರಾದ ವಸಂತ ನಾಡಿಗೇರ ಸಹ 'ಲಲಿತಾ ರವಿಶಂಕರ್ ಹೇಳೋದರಲ್ಲಿ ತಪ್ಪೇನಿಲ್ಲ. ಅವರ ಮಾತಿನಲ್ಲಿ ಅಡಗಿರುವ ಸೂಕ್ಷ್ಮ ಸಂವೇದನೆಯನ್ನು ನಾವು ಪತ್ರಕರ್ತರು ಅರ್ಥ ಮಾಡಿಕೊಳ್ಳಬೇಕು' ಎಂದರು.

ಇತ್ತೀಚೆಗೆ ಮುಂಬೈನ ಪೊವೈನಲ್ಲಿರುವ ಐಐಟಿಯಲ್ಲಿನ Cell for Indian Science and Technology in Sanskritನಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿರುವ (098691-01325) ಕೆ. ಮಹೇಶ್ ಎಂಬುವವರು ಹೀಗೆಯೇ ಒಂದು ಪದದ ಬಗ್ಗೆ ತಮ್ಮ ಆಕ್ಷೇಪ ವ್ಯಕ್ತಪಡಿಸಿದ್ದರು. ಅವರ ಪತ್ರದ ಸಾರಾಂಶ– 'ಪಟ್ಟಾಭಿಷೇಕಕ್ಕಾಗಿ 75 ಕೋಟಿ ರೂ. ಖರ್ಚು' (ವಿ.ಕ. ಫೆಬ್ರವರಿ 18) ಎಂಬ ಸುದ್ದಿಯಲ್ಲಿ 'ಸಂಸ್ಕೃತ' ಡೈಲಾಗ್‌ಕಿಂಗ್ ಸಾಯಿಕುಮಾರ್' ಎಂಬ ಪ್ರಯೋಗವನ್ನು ಯಾವ ಅರ್ಥದಲ್ಲಿ ಮಾಡಿದ್ದೀರಿ? ಬರೆದ ಧಾಟಿಯನ್ನು ಗಮನಿಸಿದರೆ 'ಕಳಪೆ ಮಟ್ಟದ ಮಾತು' ಎಂಬರ್ಥದಲ್ಲಿ ಉಪಯೋಗಿಸಿದ್ದು ಎಂಬುದು ತಿಳಿಯುತ್ತದೆ. 'ಸಂಸ್ಕೃತ' ಎಂಬ ಪದವನ್ನು ವಿಪರೀತ ಅರ್ಥದಲ್ಲಿ (ಸಂಸ್ಕೃತದ ಬಗ್ಗೆ ಸರಿಯಾಗಿ ತಿಳಿದೋ, ತಿಳಿಯದೆಯೋ) ಕೆಲವು ಜನರು ಬಳಸಬಹುದು. ಆದರೆ ಅದೇ ಅರ್ಥವನ್ನು ಪ್ರತಿಷ್ಠಿತ ಪತ್ರಿಕೆಗಳೂ ಪುಷ್ಟೀಕರಿಸುವುದಕ್ಕೆ ಹೊರಟಿದ್ದು ಸರಿಯಲ್ಲ. ನಿಮ್ಮ ಈ ಪ್ರಯೋಗವನ್ನು ನಾನು ಖಂಡಿಸುತ್ತೇನೆ. ಇನ್ನು ಮುಂದೆ 'ಸಂಸ್ಕೃತ' ಎಂಬ ಪದವನ್ನು ವಿಕೃತವಾಗಿ ಬಳಸಬೇಡಿ.'

ಮಹೇಶ್ ಅವರ ಕಳಕಳಿ ನಮಗೆ ಅರ್ಥವಾಗಬೇಕು. ಒಂದು ಪದವನ್ನು ಬೇರೆ ಅರ್ಥದಲ್ಲಿ ಬಳಸಿದಾಗ ಅದು ಹೇಗೆ ವಿರೂಪವಾಗುತ್ತದೆ, ವಿಕೃತವಾಗುತ್ತದೆ ಎಂಬ ಎಚ್ಚರ ಪತ್ರಕರ್ತರಿಗೆ ಇರದಿದ್ದರೆ ಇಂಥ ಯಡವಟ್ಟುಗಳಾಗುತ್ತವೆ. ಭಾಷೆ ಹದಗೆಡುತ್ತದೆ. ಪದೇ ಪದೆ ಬಳಸುವುದರಿಂದ ಅದು ಚಾಲ್ತಿಗೂ ಬಂದುಬಿಡುತ್ತದೆ. ಮೂಲ ಅರ್ಥಕ್ಕಿಂತ ವಿರೂಪಗೊಂಡ ಅರ್ಥದಲ್ಲಿಯೇ ಬಳಕೆ ಹೆಚ್ಚುತ್ತದೆ.

ಓದುಗರು ಸದಾ ನಮ್ಮ ಕಿವಿಹಿಂಡುತ್ತಿರಲಿ.

# ಎರಡು ಹನಿ ಕೊಡಿ!

ನಮ್ಮ ಓದುಗರೊಬ್ಬರು ಕಳಿಸಿದ ಪುಟ್ಟ ಸಂದೇಶವನ್ನು ನಿಮಗೂ ತಲುಪಿಸುತ್ತಿದ್ದೇನೆ.

ಬೇಸಿಗೆಯ ಬಿಸಿಲು ಮುಂಚಿತವಾಗಿಯೇ ತನ್ನ ಕಾವನ್ನು ಝಳಪಿಸುತ್ತಿದೆ. ನೀರಿಗೆ ಅಲ್ಲಲ್ಲಿ ಹಾಹಾಕಾರ ಕೇಳಿಬರತೊಡಗಿದೆ. ಈ ಸಲದ ಬೇಸಿಗೆ ತೀರಾ ಅಸಹನೀಯವಾಗಬಹುದೆಂಬ ಮುನ್ಸೂಚನೆ ಸಿಗಲಾರಂಭಿಸಿದೆ.

ಒಂದು ಕೆಲಸ ಮಾಡಿ, ಪ್ರತಿದಿನ ನಿಮ್ಮ ಮನೆಯ ಹೆಬ್ಬಾಗಿಲಿನ ಮುಂದೋ, ಕೈತೋಟದಲ್ಲೋ, ಕಿಟಕಿಯ ಹೊರಗೋ, ಬಾಲ್ಕನಿಯಲ್ಲೋ ಒಂದು ಲೋಟದಲ್ಲಿ ನೀರನ್ನು ಇಡಿ.

ಪಾಪ, ಬಡ ಪಕ್ಷಿಗಳು ಎರಡು ಹನಿ ನೀರನ್ನು ಕುಡಿದು ಬಾಯಾರಿಕೆ ನೀಗಿಸಿಕೊಳ್ಳಲಿ ಅಷ್ಟೆ.

## ವಕ್ರತುಂಡೋಕ್ತಿ

**ಪಾದಚಾರಿಯಾಗುವ ಒಂದು ಲಾಭವೆಂದರೆ ಎಲ್ಲಿ ಬೇಕಾದರೂ ಪಾರ್ಕಿಂಗ್‌ಗೆ ಜಾಗ ಸಿಗುತ್ತದೆ.**